ಚಾಮುಂಡೇಶ್ವರಿ ವಿದ್ಯುತ್ ಸರಬರಾಜು
ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಾರ್ಯಾಲಯ,
ಚಾವಿಸನಿನಿ, ಮೈಸೂರು-570017
Telephone No: 0821-234338

CHAMUNDESHWARI ELECTRICITY
SUPPLY CORPORATION LIMITED
*(A Government of Karnataka Undertaking)*
Corporate Office,
CESC, Mysuru-570017
**Web Site: www.cescmysore.org.**
E-mail ID:gmhrd@cescmysore.org

Company Identity Number[CIN]:- **U40109KA2004SGC035177**

**ವಿಷಯ:**- ಉಗ್ರಾಣಕ್ಕೆ ಹಿಂದಿರುಗಿಸುವ ಸಮಯದಲ್ಲಿ ಪರಿವರ್ತಕಗಳಿಂದ ತೆಗೆದ ತೈಲವನ್ನು ಕಡಿಮೆ ಪ್ರಮಾಣದಲ್ಲಿ ಹಿಂದಿರುಗಿಸಿರುವ ಬಗ್ಗೆ ಪರಿಶೀಲಿಸಲು ತಂಡ ರಚಿಸುವ ಕುರಿತು.

**ಉಲ್ಲೇಖ:** -25ನೇ ಲೆಕ್ಕ ಪರಿಶೋಧನಾ ಸಮಿತಿಯ (Audit Committe)) ಸಭೆಯ ನಡಾವಳಿ.

********

## ಪೀಠಿಕೆ:

ಚಾವಿಸನಿನಿ ವ್ಯಾಪ್ತಿಯ ಹಲವು ವಿಭಾಗಗಳಲ್ಲಿ- ವಿಫಲಗೊಂಡ ಪರಿವರ್ತಕಗಳನ್ನು ಉಗ್ರಾಣಕ್ಕೆ ಹಿಂದಿರುಗಿಸುವ ಸಮಯದಲ್ಲಿ ಪರಿವರ್ತಕಗಳಿಂದ ತೆಗೆದ ತೈಲದ ಪ್ರಮಾಣದ ಲೆಕ್ಕ ತುಲನೆಯನ್ನು ನಾಮಪಲಕದಲ್ಲಿ ನಮೂದಿಸಿರುವ ತೈಲದ ಪ್ರಮಾಣಕ್ಕಿಂತ ಶೇ.80ರಷ್ಟು ಕಡಿಮೆ ಪ್ರಮಾಣದಲ್ಲಿ ಹಿಂದಿರುಗಿಸುತ್ತಿರುವುದು ಕಂಡುಬಂದಿರುತ್ತದೆ. ಪರಿವರ್ತಕಗಳಲ್ಲಿ ನಾಮಫಲಕ ವಿವರಗಳು ಇಲ್ಲದಿದ್ದರೆ, ಪರಿವರ್ತಕದ ಸಾಮರ್ಥ್ಯಕ್ಕೆ ಅನುಗುಣವಾಗಿ ಹಿಂದಿರುಗಿಸಬೇಕಾದ ತೈಲ ಪ್ರಮಾಣದವನ್ನು ನಿಗಮ ಕಛೇರಿ ಆದೇಶ ಸಂಖ್ಯೆ:GM(T)/ E(T)/AEE(T)/C1-2028/2010-11/CYS-131 Dt:31.08.2010 ರಲ್ಲಿ ಈ ಕೆಳಕಂಡಂತೆ ಹಿಂದಿರುಗಿಸಲು ಸ್ಪಷ್ಟನಿರ್ದೇಶನ ನೀಡಲಾಗಿರುತ್ತದೆ.

**25**ಕೆವಿಎ – **85** ಲೀಟರ್

**63**ಕೆವಿಎ – **115** ಲೀಟರ್

**100** ಕೆವಿಎ – **140** ಲೀಟರ್

**250** ಕೆವಿಎ – **350** ಲೀಟರ್

ಅಧಿಕೃತ ಜ್ಞಾಪನದ ಆದೇಶದಂತೆ ವಿಫಲಗೊಂಡ ಪರಿವರ್ತಕಗಳನ್ನು ಉಗ್ರಾಣಕ್ಕೆ ಹಿಂದಿರುಗಿಸುವಾಗ ಸಂಬಂಧಿಸಿದ ಶಾಖಾಧಿಕಾರಿಗಳು ದೃಢೀಕರಣ ನೀಡಿಲ್ಲದಿರುವುದರಿಂದ ಹಲವಾರು ವಿಭಾಗಗಳಲ್ಲಿ ಪರಿವರ್ತಕಗಳ ತೈಲದ ಕೊರತೆಯ ವಸೂಲಾತಿಯು ಸಮರ್ಪಕವಾಗಿ ಆಗಿರುವುದಿಲ್ಲ.

ನಿಗಮದ ವಿಭಾಗಗಳಲ್ಲಿ ವಸೂಲಿಯಾಗದೇ ಬಾಕಿ ಉಳಿದಿರುವ ಪರಿವರ್ತಕ ತೈಲ ಕೊರತೆಯ ಮೊತ್ತದ ಬಗ್ಗೆ ಲೆಕ್ಕ ಪರಿಶೋಧನಾ ಸಮಿತಿಯಲ್ಲಿ ಗಂಭೀರವಾಗಿ ಚರ್ಚಿಸಲಾಗಿದ್ದು, ಎಲ್ಲಾ ವಿಭಾಗಗಳ ಪರಿವರ್ತಕ ತೈಲ ಕೊರತೆಯ ಕುರಿತು ವರ್ಷವಾರು ಪರಿಶೀಲಿಸಿದಾಗ, ಕೆಲವು ವಿಭಾಗಗಳಲ್ಲಿ 2005ರಿಂದ ಬಾಕಿ ಮೊತ್ತವು ವಸೂಲಿಯಾಗದೇ ಇರುವುದು ಕಂಡು ಬಂದಿರುತ್ತದೆ. ಈ ಬಗ್ಗೆ ಲೆಕ್ಕ ಪರಿಶೋಧನಾ ಸಮಿತಿಯಿಂದ ತೀವ್ರವಾದ ಆಕ್ಷೇಪ ವ್ಯಕ್ತವಾಗಿರುತ್ತದೆ. ದಿನಾಂಕ:19.07.2023ರಂದು ಜರುಗಿದ 25ನೇ ಲೆಕ್ಕ ಪರಿಶೋಧನಾ ಸಮಿತಿಯ (Audit Committee) ಸಭೆಯಲ್ಲಿ ತೆಗೆದುಕೊಂಡ ತೀರ್ಮಾನದಂತೆ, ಪರಿವರ್ತಕಗಳ ತೈಲದ ಕೊರತೆಯ ಮೊತ್ತ ವಸೂಲಿ ಮಾಡುವ ಬಗ್ಗೆ ಹಾಗೂ ವೃತ್ತಾವಾರು ಒಂದು ತಂಡವನ್ನು ರಚಿಸಿ, ಸದರಿ ತಂಡವು ವಸೂಲಿಯಾಗಬೇಕಾದ ತೈಲದ ಬಗ್ಗೆ ಕೂಲಂಕುಷವಾಗಿ ಪರಿಶೀಲಿಸಿ, ನ್ಯಾಯೋಚಿತವಾದ ವರದಿಯನ್ನು 15 ದಿನದೊಳಗೆ ನಿಗಮ ಕಛೇರಿಗೆ ನೀಡಿ, ವರದಿಯ ಆಧಾರದ ಮೇಲೆ ವಸೂಲಾತಿಗೆ ಕ್ರಮ ಕೈಗೊಳ್ಳುವಂತೆ ನೀಡಿದ ನಿರ್ದೇಶದನ್ವಯ ಕೆಳಕಂಡಂತೆ ವೃತ್ತವಾರು ಸಮಿತಿಯನ್ನು ರಚಿಸಲು ಮಾನ್ಯ ವ್ಯವಸ್ಥಾಪಕ ನಿರ್ದೇಶಕರುರವರಿಂದ ಅನುಮೋದನೆ ದೊರೆತಿರುವ ಹಿನ್ನೆಲೆಯಲ್ಲಿ ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

AGM-2
07/10/2023

D/Law/Priamble & Order/2023-24

## ಆದೇಶ

ಕ್ರಮಾಂಕ : ಸೆಸ್ಕ್/ಆ&ಮಾಸಂ/02/ಇ-60747/2023-24/ Cys-923 ದಿನಾಂಕ: 6 OCT 2023

25ನೇ ಲೆಕ್ಕ ಪರಿಶೋಧನಾ ಸಮಿತಿಯ (Audit Committee) ಸಭೆಯಲ್ಲಿ ತೆಗೆದುಕೊಂಡ ತೀರ್ಮಾನದಂತೆ, ಪರಿವರ್ತಕಗಳ ತೈಲದ ಕೊರತೆಯ ಮೊತ್ತ ವಸೂಲಿ ಮಾಡುವ ಬಗ್ಗೆ ಮುಖ್ಯ ಇಂಜಿನಿಯರ್(ವಿ) ಕಾರ್ಯ ಮತ್ತು ಪಾಲನಾ ವಲಯರವರ ಅಧ್ಯಕ್ಷತೆಯಲ್ಲಿ ಈ ಕೆಳಕಂಡಂತೆ ವೃತ್ತಾವಾರು ಒಂದು ತಂಡವನ್ನು ರಚಿಸಿ ಕೊಂಡು ಕಾರ್ಯನಿರ್ವಹಿಸಲು ಆದೇಶಿಸಿದೆ.

1.ಅಧೀಕ್ಷಕ ಇಂಜಿನಿಯರ್ (ವಿ),ಕಾರ್ಯ ಮತ್ತು ಪಾಲನಾ ವೃತ್ತ

2.ಕಾರ್ಯನಿರ್ವಾಹಕ ಇಂಜಿನಿಯರ್ , ವೃತ್ತ ಕಛೇರಿ

3.ಕಾರ್ಯ ನಿರ್ವಾಹಕ ಇಂಜಿನಿಯರ್, ವಿಭಾಗ ಕಛೇರಿ

4.ಕಾರ್ಯ ನಿರ್ವಾಹಕ ಇಂಜಿನಿಯರ್, TAQC

5.ಲೆಕ್ಕಾಧಿಕಾರಿ (ಆಂ.ಪ) ವಿಭಾಗ ಕಛೇರಿ

6. ಉಗ್ರಾಣಾಧಿಕಾರಿ ವಿಭಾಗ

ಪ್ರಧಾನ ವ್ಯವಸ್ಥಾಪಕರು(ಆ&ಮಾಸಂ)
ಚಾವಿಸನಿನಿ., ಮೈಸೂರು.

**ಸೂಚನೆ;-ಹೆಚ್ಚಿನ ಸಲಹೆ/ಸೂಚನೆ ಹಾಗೂ ಮಾಹಿತಿಗಾಗಿ ಮುಖ್ಯ ಪ್ರಧಾನ ವ್ಯವಸ್ಥಾಪಕರು(ಆಂ.ಪ) ನಿಗಮ ಕಾರ್ಯಾಲಯ ಚಾವಿಸನಿನಿ ಮೈಸೂರುರವರನ್ನು ಸಂಪರ್ಕಿಸುವುದು**

**ಪ್ರತಿಗಳು:**

1. ಮುಖ್ಯ ಪ್ರಧಾನ ವ್ಯವಸ್ಥಾಪಕರು(ಆಂ.ಪ). ಚಾವಿಸನಿನಿ, ಮೈಸೂರು.
2. ಮುಖ್ಯ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವಲಯ, ಚಾವಿಸನಿನಿ, ಮೈಸೂರು/ಹಾಸನ.
3. ಎಲ್ಲಾ ಪ್ರಧಾನ ವ್ಯವಸ್ಥಾಪಕರು, ನಿಗಮ ಕಛೇರಿ, ಚಾವಿಸನಿನಿ, ಮೈಸೂರು.
4. ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನೆ ವೃತ್ತ, ಚಾವಿಸನಿನಿ,
5. ಕಂಪನಿ ಕಾರ್ಯದರ್ಶಿ, ನಿಗಮ ಕಛೇರಿ, ಚಾವಿಸನಿನಿ, ಮೈಸೂರು ಇವರ ಮಾಹಿತಿಗಾಗಿ.
6. ~~ಉಪ ಪ್ರಧಾನ~~ ವ್ಯವಸ್ಥಾಪಕರು, ಎಂ.ಐ.ಎಸ್. ಶಾಖೆ, ನಿಗಮ ಕಛೇರಿ, ನಿಗಮದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
7. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ)/ಲೆಕ್ಕಾಧಿಕಾರಿ/ಲೆಕ್ಕಾಧಿಕಾರಿ(ಆಂ.ಪ) ಕಾರ್ಯ & ಪಾಲನಾ ವಿಭಾಗ, ಚಾವಿಸನಿನಿ,
8. ಮಾನ್ಯ ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು(ತಾಂತ್ರಿಕ)/ನಿರ್ದೇಶಕರು(ಹಣಕಾಸು)ರವರುಗಳ ಆಪ್ತ ಕಾರ್ಯದರ್ಶಿಗಳಿಗೆ ಕಳುಹಿಸುತ್ತ, ಸುತ್ತೋಲೆಯ ಮಾಹಿತಿಯನ್ನು ಮಾನ್ಯ ವ್ಯವಸ್ಥಾಪಕ ನಿರ್ದೇಶಕರು/ ನಿರ್ದೇಶಕರು (ತಾಂತ್ರಿಕ)/ ನಿರ್ದೇಶಕರು(ಹಣಕಾಸು)ರವರ ಗಮನಕ್ಕೆ ತರುವಂತೆ ಕೋರಿದೆ.
9. ವ್ಯ1(ಆ&ಮಾಸಂ)/ಪ್ರ.ಕ.